ನಿರ್ವಹಿಸಿರುತ್ತದೆ. ಕರ್ನಾಟಕ ಪಾರದರ್ಶಕ ಕಾಯ್ದೆ, ಚಾಲನೆಗೆ ಬಂದ ನಂತರ ಸದರಿ ಕಾಯ್ದೆಯಡಿ ತಹಲ್‌ವರೆವಿಗೆ ಕಾಮಗಾರಿಗಳನ್ನು ನಿರ್ವಹಿಸಿದೆ.

ಎ) ಕಂದಾಯ ಅಧಿನಿಯಮ 1964ರ ನಿಯಮ 102(ಬಿ)ರಲ್ಲಿ ಹಸಿರು ವಲಯವೆಂದು ಘೋಷಿಸಲು ಅವಕಾಶವಿದ್ದು, ಮಂಡ್ಯ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಹಸಿರು ವಲಯ ಇರುವುದಿಲ್ಲ ಬದಲಾಗಿ ವ್ಯವಸಾಯ ವಲಯ ಇರುತ್ತದೆ.

ಏ) ಪ್ರಾಧಿಕಾರದ ವತಿಯಿಂದ ಹೊಸ ಬಡಾವಣೆ ರಚನೆಗೆ ಸಂಬಂಧಪಟ್ಟ ಬೇಡಿಕೆ ಸಮೀಕ್ಷೆ ಮಾತ್ರ ಮಾಡಲಾಗಿದೆ. ಅರ್ಜಿದಾರರು ಹೊಸ ಬಡಾವಣೆಗಾಗಿ ತಮ್ಮ ಹೆಸರನ್ನು ನೊಂದಣಿ ಮಾಡಿಸಿರುತ್ತಾರೆಯೇ ಹೊರತು ನಿವೇಶನಗಳಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಅರ್ಜಿದಾರರ ಅರ್ಹತೆ ಸಮೀಕ್ಷೆ ಮಾಡುತ್ತಿದ್ದು, ಜಮೀನು ಭೂಸ್ವಾಧೀನ ಪಡಿಸಿಕೊಂಡಿರುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿವೇಶನ ಹಂಚಿಕೆ

399 (878) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2011–12ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಜ್ಯದ ಜನತೆಗೆ ನಿವೇಶನಗಳನ್ನು ಹಂಚಿಕೆ ಮಾಡುವ ಉದ್ದೇಶ ಸರ್ಕಾರ ಹೊಂದಿದೆಯೇ;

ಆ) ಹಾಗಿದ್ದಲ್ಲಿ, ನಿವೇಶನಗಳನ್ನು ಹಂಚಿಕೆ ಮಾಡಲು ಪ್ರಾಧಿಕಾರ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಿದೆ (ವಿವರ ನೀಡುವುದು);

ಇ) ನಿವೇಶನ ಹಂಚಿಕೆ ಪ್ರಾಧಿಕಾರ ಕೈಗೊಳ್ಳಲಿರುವ ಕ್ರಮಗಳೇನು?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ಆ) 1) ಅರ್ಕಾವತಿ ಬಡಾವಣೆಗಾಗಿ 1289 ಎಕರೆ 31 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಅಭಿಯಂತರ ವಿಭಾಗಕ್ಕೆ ವಹಿಸಿಕೊಡಲಾಗಿದೆ.

2) ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ 4043 ಎಕರೆ 27 ಗುಂಟೆ ಜಮೀನಿಗೆ ದಿನಾಂಕ 18–2–2010ರಂದು ಸಂಖ್ಯೆ: ಯುಡಿಡಿ 51 ಎಂಎನ್‌ಎಕ್ಸ್ 2010ರಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಮುಂದುವರೆದ ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ಇನ್ನೂ 194 ಎಕರೆ 16 ಗುಂಟೆ ಜಮೀನಿಗೆ ದಿನಾಂಕ 27-11-2009 ಸಂಖ್ಯೆ: ಬೆಂಅಪ್ರಾ/ ಆಯುಕ್ತರು/ಉಆ (ಭೂಸ್ವಾ) ಅಭುಸ್ವಾ/1140/200-9-10ರಲ್ಲಿ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

3) ಡಾ: ಶಿವರಾಮಕಾರಂತ ಬಡಾವಣೆಗಾಗಿ 3546 ಎಕರೆ 12 ಗುಂಟೆ ವಿಸ್ತೀರ್ಣದ ಜಮೀನಿಗೆ ದಿನಾಂಕ 30-12-2008ರಂದು ಸಂಖ್ಯೆ ಬಿಡಿಎ/ ಸಿಒಎಂಎಂಆರ್/ಡಿಸಿ (ಎಲ್ಎ)/ಎಸ್.ಎಲ್.ಎ.ಓ./ಎ5/ಪಿಆರ್/283/08-09ರಲ್ಲಿ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಮೇಲ್ಕಂಡ ಮೂರು ಬಡಾವಣೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಬಡಾವಣೆ ರಚನೆ ಮಾಡಿ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು.

4) ಶ್ರೀ ಕೆ.ಸಿ. ರೆಡ್ಡಿ ಬಡಾವಣೆಗಾಗಿ 2134 ಎಕರೆ 18.05 ಗುಂಟೆ.

5) ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಗಾಗಿ 2806 ಎಕರೆ 09 ಗುಂಟೆ

6) ಶ್ರೀ ಡಿ. ದೇವರಾಜ ಅರಸ್ ಬಡಾವಣೆಗಾಗಿ 1976 ಎಕರೆ 02 ಗುಂಟೆ.

ಈ ಮೇಲ್ಕಂಡ ಮೂರು ಬಡಾವಣೆಗಳಿಗೆ ದಿನಾಂಕ 28-2-2009 ಸಂಖ್ಯೆ: ನಅಇ 71 ಬೆಂಭೂಸ್ವಾ 2009ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಇನ್ನೂ ಪ್ರಾರಂಭಿಕ ಅಧಿಸೂಚನೆ ಹೊರಡಿಸಿರುವುದಿಲ್ಲ.

ಇ) ಬಡಾವಣೆ ಸಂಪೂರ್ಣವಾಗಿ ನಿರ್ಮಿಸಿದ ನಂತರ ನಿಯಮಾನುಸಾರ ನಿವೇಶನ ಹಂಚಿಕೆ ಪ್ರಕ್ರಿಯೆ ನಡೆಸಲಾಗುವುದು.

ರಾಜ್ಯದಲ್ಲಿ ಗುಡಿಸಲು ರಹಿತ ಯೋಜನೆ ಕುರಿತು

400(879) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುಡಿಸಲು ರಹಿತ ಯೋಜನೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಸರ್ಕಾರ ರೂಪಿಸಿರುವ ಕೆಲವು ನಿಯಮಗಳಿಂದ ಈ ಯೋಜನೆಯ ಜಾರಿಗೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;